**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**ಎಸ್ ಸಿ ಸಂಖ್ಯೆ–283/2022**

**ಫಿರ್ಯಾದಿದಾರಃ–** ಸರಕಾರದ ಪರವಾಗಿ
**ಸಾಲಿಗ್ರಾಮ ಪೊಲೀಸ್ ಠಾಣೆ.**

**– ವಿರುದ್ಧ –**

**ಆಪಾದಿತರ ಸಂಖ್ಯೆ–** **2. ಜಯರಾಮ ಎಂ ಆರ್ ಬಿನ್ ರಾಮಕೃಷ್ಣೇಗೌಡ,**
ವಯಸ್ಸು ಸುಮಾರು 24 ವರ್ಷಗಳು,
ವ್ಯವಸಾಯ,
ವಾಸಃ ಮೇಲೂರು ಗ್ರಾಮ, ಮಿರ್ಲೇ
ಹೋಬಳಿ, ಕೆ ಆರ್ ನಗರ ತಾಃ ಮೈಸೂರು.

**ದೋಷಾರೋಪಣೆ**

ನಾನು ಟಿ.ಗೋವಿಂದಯ್ಯ., ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು, ಹುಣಸೂರು ಪೀಠ, ಆದ ನಾನು ನಿನ್ನನ್ನು ಈ ಕೆಳಗಿನಂತೆ ದೋಷಾರೋಪಣೆಗೆ ಒಳಪಡಿಸುತ್ತಿದ್ದೇನೆ,

ದಿನಾಂಕ: 20.07.2020 ರಂದು ಮದ್ಯಾಹ್ನ, 2.00 ಗಂಟೆ ಸಮಯದಲ್ಲಿ ಠಾಣಾ ಸರಹದ್ದು ಮೇಲೂರು ಗ್ರಾಮದ ಸರ್ಕಾರಿ ಶಾಲೆ ಮುಂಭಾಗ ಅರಳಿಕಟ್ಟೆ ಪಕ್ಕದ ಮುಖ್ಯ ಟಾರು ರಸ್ತೆಯಲ್ಲಿ ಆರೋಪಿ–2 ಆದ ನೀನು ನಿಂತಿದ್ದಾಗ, ಚಾಸಾ–3 ರವರು ನಿನ್ನೆ ರಾತ್ರಿ ಒಬ್ಬನೇ ಸಿಕ್ಕಿದ್ದಾನೆ ಎಂದು ಏಕೆ ನಮ್ಮ ದೊಡ್ಡಪ್ಪನ ಮಗ ಮಹದೇವನಿಗೆ ಹೊಡೆದೆ ಎಂದು ಕೇಳಿದಕ್ಕೆ ಅದನ್ನು ಕೇಳಲು ನೀನ್ಯಾರು, ನಾನು ಹೊಡೆದೆ ಏನು ಕಿತ್ತು ಕೊತ್ತೀಯಾ ಎಂದು ಆರೋಪಿ–2 ಆದ ನೀನು ಚಾಸಾ–3 ರವರಿಗೆ ಕೈಯಿಂದ ಮೈಗೆ ಒಂದು ಏಟನ್ನು ಹೊಡೆದಿರುವುದು, ನಂತರ ಆರೋಪಿ–2 ಆದ ನೀನು ಮತ್ತು ಚಾಸಾ–3 ರವರು ಕಲ್ಲುಗಳನ್ನು ಎತ್ತಿಕೊಂಡು ಬೀಸುತ್ತಿದ್ದಾಗ, ಆರೋಪಿ–2 ಅಲ್ಲೆ ಹತ್ತಿರದ ನಿಮ್ಮ ಮನೆಗೆ ಹೋಗಿ ಆರೋಪಿ–1 ಅನ್ನು ಕರೆದುಕೊಂಡು ಬಂದಿರುವುದು, ನಂತರ ಆರೋಪಿ–1 ಮತ್ತು ಆರೋಪಿ–2 ಆದ ನೀವುಗಳು ಸೇರಿ ಚಾಸಾ–3 ರವರಿಗೆ ಕಲ್ಲುಗಳಿಂದ ಹೊಡೆಯಲು ಬೀಸಿರುವುದು, ಬೀಸಿದ ಕಲ್ಲುಗಳಿಂದ ತಪ್ಪಿಸಿಕೊಳ್ಳಲು ಚಾಸಾ–3 ರವರು ಅಲ್ಲೆ ನಿಲ್ಲಿಸಿದ್ದ ಕಾರಿನ ಮರೆಯಲ್ಲಿ ಅವಿತುಕೊಂಡಿದ್ದಾಗ, ಆರೋಪಿಗಳಾದ ನೀವುಗಳು ಬೀಸಿದ ಕಲ್ಲುಗಳು ನಿಲ್ಲಿಸಿದ

ಕೆ.ಎ–03 ಎಸಿ–9490ರ ಟಾಟಾ ಇಂಡಿಕಾ ಕಾರಿನ ಗ್ಲಾಸ್ ಗೆ ಬಿದ್ದು, ಕಾರಿನ ಮುಂಭಾಗದ ಗ್ಲಾಸ್ ಹಾಗೂ ಕಿಟಕಿಯ ಗ್ಲಾಸ್ ಗಳು ಹೊಡೆದು ಹೋಗಿ ನಷ್ಟ ಉಂಟಾಗಿರುವುದು, ಚಾಸಾ–3 ರವರಿಗೆ ಹೊಡೆಯುವುದನ್ನು ತಡೆಯಲು ಬರುತ್ತಿದ್ದ ಚಾಸಾ–2 ರವರ ಕಾಲಿಗೆ ಆರೋಪಿಗಳು ಬೀಸಿದ ಕಲ್ಲುಗಳು ಬಿದ್ದು ನೋವುಂಟಾಗಿರುವುದು, ನಂತರ ಚಾಸಾ–2 ರವರು ಆರೋಪಿ–1 ಮತ್ತು ಆರೋಪಿ–2 ಆದ ನಿಮಗೆ ಏಕೆ ಹೊಡೆದಾಡಿ ಸಾಯುತ್ತೀರಾ ಮನೆಗೆ ಹೋಗಿ ಎಂದು ಹೇಳಿದಾಗ ಆರೋಪಿ–1 ಆದ ನೀನು ಅದನ್ನು ಕೇಳಲು ನಿನ್ಯಾರು ಎಂದು ತನ್ನ ಜೇಬಿನಲ್ಲಿದ್ದ ಚಾಕುವನ್ನು ತೆಗೆದು ಕೊಲೆ ಮಾಡುವ ಉದ್ದೇಶದಿಂದ ಚಾಸಾ–2 ರವರ ಕುತ್ತಿಗೆ (ಮೆಟ್ರಿಗೆ) ತಿವಿದು, ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ, ಇಲ್ಲೆ, ಸಾಯಿಸುತ್ತೇನೆ ಎಂದು ಬೆದರಿಕೆ ಹಾಕಿರುವುದು ಭಾರತೀಯ ದಂಡ ಸಂಹಿತೆ ಕಲಂ 323, 324, 427, 307 ಸಹವಾಚಕ 34 ರೀತ್ಯಾ ಅಪರಾಧವೆಸಗಿರುತ್ತೀರಿ.

ಈ ಮೇಲಿನ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಬರುವುದರಿಂದ ಈ ಕುರಿತು ನಿನ್ನನ್ನು ಅಧಿವಿಚಾರಣೆಗೆ ಒಳಪಡಿಸಲು ಆದೇಶಿಸುತ್ತಿದ್ದೇನೆ.

**(ಟಿ.ಗೋವಿಂದಯ್ಯ)**
ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.